ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ

# ವಾರ್ಷಿಕ ವರದಿ 2019-‘20

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರದ ಹತ್ತಿರ
ಜಿ.ಕೆ.ವಿ.ಕೆ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪುರ ಪೋಸ್ಟ್, ಯಲಹಂಕ,
ಬೆಂಗಳೂರು – 560 097

# ಪರಿವಿಡಿ

1. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಧಾನ ಸಮ್ಮೇಳನ ........ 2

2. ಗಣಿತ ವಿಜ್ಞಾನ ಮತ್ತು ಅದರ ಅನ್ವಯಿಕಗಳು – ರಾಷ್ಟ್ರೀಯ ಸಮ್ಮೇಳನ ........ 4

3. ರಸಾಯನಿಕ ವಿಜ್ಞಾನದಲ್ಲಿನ ಹೊಸ ಆವಿಷ್ಕಾರಗಳು–ರಾಷ್ಟ್ರೀಯ ಸಮ್ಮೇಳನ ........ 6

4. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ ........ 7

5. ಭೌತಶಾಸ್ತ್ರ ಹಾಗೂ ಸಂಬಂಧಿತ ವಿಜ್ಞಾನ ವಿಷಯದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ........ 9

6. ವಿಜ್ಞಾನ ಲೋಕ ಪ್ರಕಟಣೆ ........ 10

7. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ ........ 11

8. ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು ........ 13

9. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ ........ 14

10. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು ........ 15

11. ವಿಭಾಗ ಮತ್ತು ರಾಜ್ಯ ಮಟ್ಟದ ನಾಟಕ, ಗಣಿತ, ಚಿತ್ರಕಲೆ/ಪೈಂಟಿಂಗ್ ಹಾಗೂ ಪ್ರಬಂಧ ಸ್ಪರ್ಧೆ ........ 15

12. ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳು ........ 17

13. ಸ್ಮಾಲ್ ಗ್ರಾಂಟ್ಸ್ ........ 17

14. ನ್ಯಾನೋ ಜಾತಾ ಕಾರ್ಯಕ್ರಮಗಳು ........ 17

ಸಂಪರ್ಕಿಸಬೇಕಾದ ವಿಳಾಸ: ........ 18

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

### ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆ, ಮೂಲ ವಿಜ್ಞಾನಕ್ಕೆ ಉತ್ತೇಜನ ಹಾಗೂ ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಸಲುವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಜುಲೈ ೩೦, ೨೦೦೫ (ಸರ್ಕಾರಿ ಆದೇಶ ಸಂಖ್ಯೆ: ವಿಯಇ 70 ವಿತ್ರಮ 2004)ರಂದು ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ದಿವಂಗತ ಪ್ರೊ. ಯು. ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಸರ್ಕಾರವು ಸ್ಥಾಪಿಸಿತ್ತು.

ಅಕಾಡೆಮಿಯ ಸಮಿತಿಯನ್ನು ದಿನಾಂಕ 21.04.2020 ರಂದು ಪುನರಚಿಸಿ ಸರ್ಕಾರವು ಆದೇಶವನ್ನು ಹೊರಡಿಸಿದ್ದು, ಭಾರತೀಯ ಕೃಷಿ ಅನುಸಂದಾನ ಪರಿಷತ್‌ನ (ICAR) ನಿವೃತ್ತ ಮಹಾ ನಿರ್ದೇಶಕರು ಹಾಗೂ ಭಾರತ ಸರ್ಕಾರದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆಯ ನಿವೃತ್ತ ಕಾರ್ಯದರ್ಶಿಗಳಾದ ಪ್ರೊ. ಎಸ್. ಅಯ್ಯಪ್ಪನ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ಕಾರ್ಯದರ್ಶಿಗಳಾದ ಡಾ. ಹೆಚ್. ಹೊನ್ನೇಗೌಡರವರು ಅಕಾಡೆಮಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ.

೨೦೧೯–'೨೦ನೇ ಸಾಲಿನಲ್ಲಿ ಅಕಾಡೆಮಿಯ ವತಿಯಿಂದ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

## 1. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಧಾನ ಸಮ್ಮೇಳನ

ಜೀವ, ರಸಾಯನ ಮತ್ತು ಆರೋಗ್ಯ ವಿಜ್ಞಾನಗಳು ಅಂತಾರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರಿನ ರಾಮಯ್ಯ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಹಯೋಗದೊಂದಿಗೆ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ೨೦೧೯ರ ಅಕ್ಟೋಬರ್ ೨೪–೨೬ ರಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಸಮ್ಮೇಳನವನ್ನು ೨೦೧೯ರ ಅಕೋಬರ್ ೨೪ ರಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಪದ್ಮಭೂಷಣ ಪುರಸ್ಕೃತ ಡಾ. ಗೋವಿಂದರಾಜನ್ ಪದ್ಮನಾಭನ್‌ರವರು ಉದ್ಘಾಟಿಸಿ, ಚಾಲನೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಡಾ. ಎಂ. ಆರ್. ಜಯರಾಂ ರವರು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ನೆದರ್‌ಲ್ಯಾಂಡ್ ಎಂಬೆಸ್ಸಿಯ ಕನ್ಸುಲೇಟ್ ಜನರಲ್‌ರಾದ ಶ್ರೀ ಗರ್ಟ್ ಹೈಕೂಪ್ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ಕಾರ್ಯದರ್ಶಿಗಳು ಮತ್ತು ಅಕಾಡೆಮಿಯ ಸದಸ್ಯ ಕಾರ್ಯದರ್ಶಿಗಳಾದ ಡಾ. ಹೆಚ್. ಹೊನ್ನೇಗೌಡರವರು ಗೌರವಾನ್ವಿತ ಅತಿಥಿಗಳಾಗಿ ಉಪಸ್ಥಿತರಿಸಿದ್ದರು. ರಾಮಯ್ಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎ. ನಾಗರತ್ನರವರು ಗಣ್ಯರನ್ನು ಸ್ವಾಗತಿಸಿದರೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್‌ರವರು ವಂದಿಸಿದರು.

ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಬೇಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರು ಮತ್ತು ಅಕಾಡೆಮಿ ಸದಸ್ಯರಾದ ಡಾ. ಹೆಚ್. ಎಸ್. ನಾಗರಾಜರವರು ವಹಿಸಿದ್ದು, ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಗಣಿತ ವಿಭಾಗದ ಮುಖ್ಯಸ್ಥರಾದ ಡಾ. ಕೆ. ಎಂ.

ರೂಪಾ ರವರು ಮತ್ತು ಗೋಕುಲಾ ಎಜುಕೇಷನ್ ಪೌಂಡೇಷನ್‌ನ ಚೀಫ್ ಆಫ್ ಫೈನಾನ್ಸ್ ಶ್ರೀ ಜಿ ರಾಮಚಂದ್ರರವರು ವಿವಿಧ ವಿಷಯಗಳ ಪ್ರಾತ್ಯಕ್ಷಿಕೆ ಪ್ರದರ್ಶನ ಸ್ಪರ್ಧೆಯ ವಿಜೇತರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಮೂರು ದಿನಗಳು ನಡೆದ ಈ ಸಮ್ಮೇಳನದ ತಾಂತ್ರಿಕ ಅಧಿವೇಶನದಲ್ಲಿ ಖ್ಯಾತ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಖ್ಯಾತ ಶಿಕ್ಷಣ ತಜ್ಞರಿಂದ ಸಮ್ಮೇಳನದ ಕೇಂದ್ರ ವಿಷಯಕ್ಕೆ ಸಂಬಂಧಿಸಿದ ಒಟ್ಟು 15 ಆಹ್ವಾನಿತ ಉಪನ್ಯಾಸಗಳನ್ನು ಈ ಕೆಳಕಂಡಂತೆ ಏರ್ಪಡಿಸಲಾಗಿತ್ತು:

| ಸೆಷನ್ | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| **Session I<br>Biochemistry & Structural Biology** | Dr. Rangarajan PN,<br>Professor, Dept. of Biochemistry, IISc, Bangalore | Production of therapeutic proteins in the yeast, pichia pastirus |
| | Dr. Gopal B<br>Professor, Dept. Molecular Biophysics, IISc, Bangalore | Structural dynamics of enzymes |
| **Session II<br>Biodiversity, Behaviour & Conservation** | Dr. Manoharachary C<br>Fellow, National Academy of Sciences, India (NASI), Indian Phyto-pathological Society Department of Botany, Osmania University, Hyderabad. | Role of microbes, fungi, lichens and plants for sustainable agriculture and human welfare |
| | Dr. Axel Brockmann<br>Scientist, Honey Bee Lab<br>National Center for Biological Sciences (NCBS), Bangalore | Towards identifying molecular mechanism underlying advanced behavioural capabilities in insects |
| **Session III<br>Therapeutics & Biosimilars** | Dr. Kini Manjunath<br>Professor, Department of Biological Sciences, Faculty of Sciences, National University of Singapore, Singapore. | From toxins to therapeutics: new cardiovascular therapeutic agents |
| | Dr. Sucharita Jayakar<br>Senior Scientific Manager, Biocon Research Limited | A bird's-eye-view of small molecules and biologics |
| | Dr. Chandrasekhar Kuravangi<br>Associate Scientific Manager, Biocon R&D | Biosimilars-biologics for billions |
| **Innovation and Entrepreneurship** | Dr. Taslimarif Saiyed<br>CEO and Director, Centre for Cellular and Molecular Platforms (C-CAMP), Bangalore | Critical ingredients for catalyzing life science innovation ecosystem |
| **Session IV<br>Development & Disease** | Dr. Saptagiri Polani<br>Sr. Professor, Dept. of MRDG, Indian Institute of Science, Affiliate Scientist, WI-National Primate Research Center, Madison USA. | Development and differentiation of early embryos & embryonic stem cells |
| | Dr. Sateesh Maddirevula<br>Associate Scientist, Department of Genetics, KFSHRC Riyadh, Saudi Arabia. | Autozygome, a map of autosomal recessive genetic disorders and beyond |
| **Session V<br>Nanomaterials & Green Chemistry** | Dr. Mike Rajamathi<br>Associate Professor, St. Joseph's College, Bangalore | Exfoliation of layered solids: a top down approach in the synthesis of functional nanomaterials |
| | Dr. Krishnamurthy V<br>Registrar, PES University, Bangalore, India. | Green chemistry and metal toxicity |
| **Session VI<br>Genomics & Proteomics** | Dr. Keshav Prasad<br>Professor and Deputy Director, Center for Systems Biology and Molecular Medicine, Yenepoya (Deemed to be University), Mangalore, India. | Proteomics and proteogenomics as discovery tools to identify actionable molecules in human diseases |

| ಸೆಷನ್ | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| Science & Art | Dr. Ipsa Jain<br>Scientist-artist/Postdoctoral fellow with Dr. Minhaj Sirajuddin at InStem Bangalore. | Science and art go for a walk together |
| Session VII<br>Bioengineering & Biotechnology | Dr. Ramakrishna<br>Chairman, Research Advisory Committee, Salim Ali Institute of Ornithology and Natural History, Coimbatore, Tamilnadu, India. | Synthetic biology: an emerging area of bioengineering and biotechnology |

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಮತ್ತು ಕಾಲೇಜುಗಳ ಬೋಧಕರು, ವಿಜ್ಞಾನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ವಿಜ್ಞಾನ ಬರಹಗಾರರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸರ್ಕಾರದ ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಸುಮಾರು 700 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಜೀವ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಆರೋಗ್ಯ ವಿಜ್ಞಾನಗಳಿಗೆ ಸಂಬಂಧಿಸಿದ ಸುಮಾರು 300 ಕ್ಕೂ ಹೆಚ್ಚು ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು (Poster Presentation) ಮಂಡಿಸಲಾಯಿತು. ಪ್ರತಿ ವಿಷಯದಲ್ಲಿ ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ 4 ಪ್ರಾತ್ಯಕ್ಷಿಕೆಗಳಿಗೆ ಬಹುಮಾನಗಳನ್ನು (ಪ್ರಥಮ – ರೂ. 10,000/–; ದ್ವಿತೀಯ – ರೂ. 7,500/– ಹಾಗೂ 2 ಸಮಾಧಾನಕರ ಬಹಮಾನಗಳನ್ನು ತಲಾ ರೂ. 5,000/–) ನೀಡಲಾಯಿತು.






## 2. ಗಣಿತ ವಿಜ್ಞಾನ ಮತ್ತು ಅದರ ಅನ್ವಯಿಕಗಳು – ರಾಷ್ಟ್ರೀಯ ಸಮ್ಮೇಳನ

'ಗಣಿತ ವಿಜ್ಞಾನ ಮತ್ತು ಅದರ ಉಪಯುಕ್ತತೆಗಳು' ಎಂಬ ಕೇಂದ್ರ ವಿಷಯದಡಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಎರಡು ದಿನಗಳ ಕಾಲ 2019ರ ನವೆಂಬರ್ 07 ಮತ್ತು 08 ರಂದು ಬಹಳ ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಸಮ್ಮೇಳನವನ್ನು ದಿನಾಂಕ 07ನೇ ನವೆಂಬರ್ 2019 ರಂದು ಬೆಳಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸುವರ್ಣ ಮಹೋತ್ಸವ ಆಡಿಟೋರಿಯಂನಲ್ಲಿ ಮಾನ್ಯ ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಅವರು ಉದ್ಘಾಟಿಸಿ, ಚಾಲನೆ ನೀಡಿದರು. ಧಾರವಾಡ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಅರವಿಂದ ಬೆಲ್ಲದರವರು ಹಾಗೂ ಮಾನ್ಯ ವಿದಾನ ಪರಿಷತ್ ಸದಸ್ಯರಾದ ಶ್ರೀ ಎಸ್. ವಿ. ಸಂಕನೂರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್ ರವರು ಹಾಗೂ ಟಿ.ಐ.ಎಫ್.ಆರ್-ಸಿಎಎಂ ಸಂಸ್ಥೆಯ ಡೀನ್ ಪ್ರೊ. ವೀರಪ್ಪಗೌಡರವರು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ ಶಿರಾಲ ಶೆಟ್ಟಿ ಅವರು ವಹಿಸಿದ್ದರು. ಪ್ರೊ. ಪಿ.ಎಂ. ಪಾಟೀಲ್, ಮುಖ್ಯಸ್ಥರು, ಗಣಿತ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ ಇವರು ಕಾರ್ಯಕ್ರಮದ ಪರಿಚಯವನ್ನು ಮಾಡಿಕೊಟ್ಟು ಅತಿಥಿಗಳನ್ನು ಸ್ವಾಗತಿಸಿದರೆ, ಅಕಾಡೆಮಿಯ ವೈಜ್ಞಾನಿಕ ಅಧಿಕಾರಿ ಶ್ರೀ ವಿ. ಕೆ. ಶ್ರೀನಿವಾಸ ವಂದಿಸಿದರು.

ಸಮ್ಮೇಳನದ ತಾಂತ್ರಿಕ ಅಧಿವೇಶನದಲ್ಲಿ ಈ ಕೆಳಕಂಡಂತೆ ಎಂಟು ವಿದ್ವತ್ಪೂರ್ಣ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು:

| | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| **Talk 01** | Prof. C. S. Rajan,<br>TIFR, Mumbai | A historical introduction to reciprocity in number theory |
| **Talk 02** | Prof. A. Adimurthi<br>TIFR-CAM, Bengaluru | Structure of entropy solutions for hyperbolic scalar conservation laws in one space dimension |
| **Talk 03** | Prof. Satyajit Roy<br>IIT Madras, Chennai | Non-uniform mass transfer and non-uniform heating in fluid flow problems |
| **Talk 04** | Prof. Manjunath Krishnapur<br>IISc, Bengaluru | Statistics for everyone |
| **Talk 05** | Prof. G. D. Veerappa Gowda<br>TIFR, Bengaluru | Conservation laws and Hamilton-Jacobi equations and some of applications |
| **Talk 06** | Prof. Sharad Sane<br>CMI, Chennai | Equiangular Lines in the real space $R^d$ |
| **Talk 07** | Prof. S. Ponnusamy<br>IIT Madras, Chennai | On the logarithmic coefficients of univalent functions and related investigations |
| **Talk 08** | Prof. Sudhir Ghorapade<br>IIT Bombay, Mumbai | A version of Hilbert's Nullstellensatz over finite fields, Gröbner bases and footprint bounds |

ವಿವಿಧ ವಿಶ್ವವಿದ್ಯಾಲಯಗಳ/ ಕಾಲೇಜು/ಶಿಕ್ಷಣ ಸಂಸ್ಥೆಗಳ ಗಣಿತ ವಿಜ್ಞಾನ ಪ್ರಾಧ್ಯಾಪಕರು, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ, ಸುಮಾರು 600ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಲ್ಲದೆ, ಮೂಲ ಮತ್ತು ಅನ್ವಯಿಕ ಗಣಿತ ವಿಜ್ಞಾನಕ್ಕೆ ಸಂಬಂಧಿಸಿದ 200ಕ್ಕೂ ಹೆಚ್ಚು ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು ಸ್ನಾತಕೋತ್ತರ/ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ವಿಜ್ಞಾನಿಗಳು ಮಂಡಿಸಿದರು. ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಆಯ್ಕೆ ಮಾಡಿ, ಪ್ರತಿ ವಿಷಯದಲ್ಲೂ ಮೂರು ಬಹುಮಾನಗಳನ್ನು ನೀಡಲಾಯಿತು (ಮೊದಲನೇ ಬಹುಮಾನ ರೂ. 10,000/- ಹಾಗೂ ಎರಡನೇ ಬಹುಮಾನ ರೂ. 7,500/-ಗಳು ಹಾಗೂ ತೃತೀಯ ಬಹುಮಾನ ರೂ. 5000/-ಗಳು).



### ೩. ರಸಾಯನಿಕ ವಿಜ್ಞಾನದಲ್ಲಿನ ಹೊಸ ಆವಿಷ್ಕಾರಗಳು–ರಾಷ್ಟ್ರೀಯ ಸಮ್ಮೇಳನ

ಮೈಸೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಯೋಗದಲ್ಲಿ ೨೦೨೦ರ ಜನವರಿ ೩೦–೩೧ರಲ್ಲಿ ರಸಾಯನ ವಿಜ್ಞಾನದಲ್ಲಿನ ಹೊಸ ಆವಿಷ್ಕಾರಗಳ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ಈ ಸಮ್ಮೇಳನವನ್ನು ೨೦೨೦ರ ಜನವರಿ ೩೦ರಂದು ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯ ನಿರ್ದೇಶಕರಾದ ಪ್ರೊ. ಕೆ. ಎನ್. ಗಣೇಶ್ ರವರು ಉದ್ಘಾಟಿಸಿ, ಪ್ರಧಾನ ಭಾಷಣ ಮಾಡಿದರು. ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಆರ್. ಶಿವಪ್ಪರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಹಾಗೂ ೧೦೭ನೇ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಪ್ರೊ. ಕೆ. ಎಸ್. ರಂಗಪ್ಪ ರವರು ಹಾಗೂ ಅಕಾಡೆಮಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್‌ರವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಗಳು ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ವೈ. ಬಿ. ಬಸವರಾಜು ಗಣ್ಯರನ್ನು ಸ್ವಾಗತಿಸಿದರೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಹಿರಿಯ ವೈಜ್ಞಾನಿಕ ಅಧಿಕಾರಿಗಳಾದ ಡಾ. ಆನಂದ್ ಆರ್ ರವರು ವಂದಿಸಿದರು.

ಸಮ್ಮೇಳನದ ತಾಂತ್ರಿಕ ಅಧಿವೇಶನದಲ್ಲಿ ಪ್ರತಿಷ್ಠಿತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರಗಳಿಂದ ಖ್ಯಾತ ವಿಜ್ಞಾನಿಗಳು ಮತ್ತು ಸಂಶೋಧಕರಿಂದ ಏಳು ಶ್ರೇಷ್ಠ ಉಪನ್ಯಾಸಗಳನ್ನು ಈ ಕೆಳಕಂಡಂತೆ ಏರ್ಪಡಿಸಲಾಗಿತ್ತು:

| | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| **Talk 01** | Prof. K. N. Ganesh,<br>Director, Indian Institute of Science Education and Research (IISER) Tirupati | Peptide Nucleic Acids (PAN): New analogues for improved cell permentation and therapeutics |
| **Talk 02** | Dr. A. K. Nangia<br>Director, CSIR-National Chemical Laboratory, Dr. Homi Bhabha Road, Pune | Crystal engineering of solid-state pharmaceuticles |
| **Talk 03** | Dr. Mrinmoy De<br>Dept.of Organic Chemistry, IISc, Bangalore | 2D-MoS: Role of phases and functionalisation towards antibacterial activity and catalysis |
| **Talk 04** | Dr. Prakash A. S<br>Professor, Central Electrochemical Research Institute-Chennai Unit, CSIR-Madras Complex, Taramani, Chennai | Materials development for efffiecient energy storage in batteries : from consumer electronics to automobiles |

| | | |
|---|---|---|
| Talk 05 | Dr. Balaraju J N<br>Deputy Head, CSIR – National Aerospace Laboratory, HAL Airport Road, Bangalore | Electroless deposited nickle alloy and composit coating for aerospace and engineering applications |
| Talk 06 | Dr. K. Bhanuprakash<br>Chief Scientist, CSIR-IICT, Hyderabad | Designing and understanding molecular materials using computational chemistry |
| Talk 07 | Dr. P. M. Radhakrishna<br>ChemLife Innovations, Bengaluru | Application of natural deep eutectic solvents (NADES) in food pharma sector |

ರಾಜ್ಯದ ವಿವಿದ ವಿಶ್ವವಿದ್ಯಾಲಯಗಳ/ ಕಾಲೇಜು/ಶಿಕ್ಷಣ ಸಂಸ್ಥೆಗಳ ಪ್ರಾಧ್ಯಾಪಕರು, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ವಿಜ್ಞಾನ ಬರಹಗಾರರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸರ್ಕಾರದ ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ, ಸುಮಾರು ೫೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ರಸಾಯನ ವಿಜ್ಞಾನ ವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು 170 ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು (Poster Presentation) ಮಂಡಿಸಲಾಯಿತು. ಪ್ರತಿ ವಿಷಯದಲ್ಲಿ ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ 4 ಪ್ರಾತ್ಯಕ್ಷಿಕೆಗಳಗೆ ಬಹುಮಾನಗಳನ್ನು (ಪ್ರಥಮ – ರೂ. 10,೦೦೦/–; ದ್ವಿತೀಯ – ರೂ. 7,5೦೦/– ಹಾಗೂ 2 ಸಮಾಧಾನಕರ ಬಹಮಾನಗಳನ್ನು ತಲಾ ರೂ. 5,೦೦೦/–) ನೀಡಲಾಯಿತು.




### 4. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ತೃತೀಯ ಕನ್ನಡ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು "ವಿಜ್ಞಾನ ಮತ್ತು ತಂತ್ರಜ್ಞಾನ ಹೊಸ ಆಯಾಮಗಳು" ಎಂಬ ಕೇಂದ್ರ ವಿಷಯದ ಮೇಲೆ ೨೦೨೦ರ ಫೆಬ್ರವರಿ 18 ಮತ್ತು 19 ರಂದು ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯದ ವಿಜಯಪುರದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ರಾಜ್ಯಮಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನ ಕನ್ನಡ ಸಮ್ಮೇಳನವನ್ನು ೨೦೨೦ರ ಫೆಬ್ರವರಿ 18 ರಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು ಹಾಗೂ ಶಿಕ್ಷಣ ತಜ್ಞರಾದ ಪ್ರೊ. ಕೆ. ಚಿದಾನಂದ ಗೌಡರವರು ಉದ್ಘಾಟಿಸಿ ಚಾಲನೆ ನೀಡಿದರು. ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಅಶೋಕ್ ಆಲೂರ್‌ರವರು ಪ್ರಧಾನ ಭಾಷಣ ಮಾಡಿದರು. ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿರುವ ಡಾ. ಶಿವಾನಂದ ಕಣವಿರವರು ಹಾಗೂ ಮ್ಯಾಕಿನ್‌ಸೇ ಸಂಸ್ಥೆಯ

ಅಂತಾರಾಷ್ಟ್ರೀಯ ತಜ್ಞ ಸಮಿತಿಯ ಸದಸ್ಯರಾದ ಡಾ. ಉದಯ್‌ಶಂಕರ್ ಪುರಾಣಿಕ್‌ರವರು ಹಾಗೂ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್ ರವರು ಸಮಾರಂಭದ ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು. ಸಮ್ಮೇಳನದ ಸಂಯೋಜಕರಾದ ಡಾ. ಗಿರಿಜಾ ನಿಂಬಾಳರವರು ಗಣ್ಯರನ್ನು ಮತ್ತು ಅತಿಥಿಗಳನ್ನು ಸ್ವಾಗತಿಸಿದರು. ಅಕಾಡೆಮಿಯ ಆಡಳತಾಧಿಕಾರಿಗಳಾದ ಶ್ರೀ ಮಹದೇವೇಗೌಡರವರು ವಂದಿಸಿದರು.





ಸಮ್ಮೇಳನದ ತಾಂತ್ರಿಕ ಅಧಿವೇಶನದಲ್ಲಿ ಪ್ರತಿಷ್ಠಿತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರಗಳಿಂದ ಖ್ಯಾತ ವಿಜ್ಞಾನಿಗಳು ಮತ್ತು ಸಂಶೋಧಕರಿಂದ ಏಳು ಶ್ರೇಷ್ಠ ಉಪನ್ಯಾಸಗಳನ್ನು ಈ ಕೆಳಕಂಡಂತೆ ಏರ್ಪಡಿಸಲಾಗಿತ್ತು:

| | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| 1 | ಡಾ. ಅಶೋಕ್ ಆಲೂರು<br>ಕುಲಪತಿಗಳು, ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಿಶ್ವವಿದ್ಯಾಲಯ, ಅನಂತಪುರ | ಕೃಷಿ ಮತ್ತು ತೋಟಗಾರಿಕಾ ವಿಜ್ಞಾನದಲ್ಲಿ ಹೊಸ ಆಯಾಮಗಳು |
| 2 | ಡಾ. ಶಿವಾನಂದ ಕಣವಿ<br>ಸಂದರ್ಶಕ ಪ್ರಾಧ್ಯಾಪಕರು, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು | ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಡಿಜಿಟಲ್ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು |
| 3 | ಡಾ. ಕೃಷ್ಣ ಪ್ರಸಾದ್<br>ವಿಜ್ಞಾನಿ-ಜಿ, ಸೆಂಟರ್ ಫಾರ್ ನ್ಯಾನೋ ಸೈನ್ಸ್ & ಸ್ಫಾಟ್ ಮ್ಯಾಟರ್ (CeNS), ಬೆಂಗಳೂರು | ನ್ಯಾನೋ ತಂತ್ರಜ್ಞಾನದಲ್ಲಿ ಹೊಸ ಆಯಾಮಗಳು |
| 4 | ಡಾ. ಶೈಲಜಾ ಎಸ್. ಪಾಟೀಲ್<br>ಪ್ರಾಧ್ಯಾಪಕರು & ಮುಖ್ಯಸ್ಥರು, ಸಮುದಾಯ ಔಷಧ ವಿಭಾಗ<br>ಶ್ರೀ ಬಿ. ಎಂ. ಪಾಟೀಲ್ ವೈದ್ಯಕೀಯ ಕಾಲೇಜು, ವಿಜಯಪುರ | ಆರೋಗ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು |
| 5 | ಡಾ. ಉದಯಶಂಕರ್ ಪುರಾಣಿಕ್<br>ಮಾರ್ಗದರ್ಶಕರು, ಅಟಲ್ ಇನ್ನೊವೇಷನ್ ಮಿಷನ್/ ಮಾಹಿತಿ ತಂತ್ರಜ್ಞಾನ ಲೇಖಕರು | ಸೈಬರ್ ಭದ್ರತೆಯಲ್ಲಿ ಹೊಸ ಆಯಾಮಗಳು |
| 6 | ಡಾ. ಎಂ. ವಿ. ರೂಪ<br>ಹಿರಿಯ ವಿಜ್ಞಾನಿ ಐ.ಎಸ್.ಟಿ.ಆರ್.ಎ.ಸಿ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಬೆಂಗಳೂರು | ಭಾರತೀಯ ಬಾಹ್ಯಾಕಾಶ ಸಂಶೋಧನೆಯಲ್ಲಿ ಹೊಸ ಆಯಾಮಗಳು |
| 7 | ಡಾ. ಬದ್ರಿ ಪ್ರಸಾದ್ ಪಿ ಆರ್<br>ವಿಜ್ಞಾನಿ, ಕೃಷಿ ಸಂಶೋಧನಾ ಕೇಂದ್ರ<br>ಕೊಪ್ಪಳ | ಜೇನು ಕೃಷಿಯಲ್ಲಿ ಹೊಸ ಆಯಾಮಗಳು |

ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 500 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಭೌತ ವಿಜ್ಞಾನ, ರಸಾಯನ ಮತ್ತು ಜೀವ ವಿಜ್ಞಾನಗಳಿಗೆ ಸಂಬಂಧಿಸಿದ ಸುಮಾರು 100 ಕ್ಕೂ ಹೆಚ್ಚು

ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು (Poster Presentation) ಕನ್ನಡದಲ್ಲಿ ಮಂಡಿಸಲಾಯಿತು. ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ 4 ಪ್ರಾತ್ಯಕ್ಷಿಕೆಗಳಗೆ ಬಹುಮಾನಗಳನ್ನು (ಪ್ರಥಮ – ರೂ. 10,000/-; ದ್ವಿತೀಯ – ರೂ. 7,500/- ತೃತೀಯ ರೂ. 5,000/- ಹಾಗೂ ಸಮಾಧಾನಕರ ಬಹಮಾನಗಳನ್ನು ರೂ. 3,000/-) ನೀಡಲಾಯಿತು.

## 5. ಭೌತಶಾಸ್ತ್ರ ಹಾಗೂ ಸಂಬಂಧಿತ ವಿಜ್ಞಾನ ವಿಷಯದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ವಿಜ್ಞಾನಾಸಕ್ತರಿಗಾಗಿ ಅಕಾಡೆಮಿಯ ವತಿಯಿಂದ ಬೀದರ್‌ನ ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದ ಸಹಯೋಗದಲ್ಲಿ 2020ರ ಮಾರ್ಚ್ 11-13ರವರೆಗೆ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ದಿನಾಂಕ 2020ರ ಮಾರ್ಚ್ 11 ರಂದು ಉದ್ಘಾಟನೆಯನ್ನು ನೆರವೇರಿಸಿ ಚಾಲನೆ ನೀಡಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಭೀಮಾಶಂಕರ ಬಿಲಗುಂದಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲೆಯ ಗೌರವಾನ್ವಿತ ಸಂಸದರಾದ ಶ್ರೀ ಭಗವಂತ ಖೂಬಾ ಹಾಗೂ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ಶಿವಾನಂದ ದೇವರಮನಿರವರು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು. ಅಕಾಡೆಮಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ.ಎಂ. ರಮೇಶ್‌ರವರು ಮತ್ತು ಪುಣೆಯ ರಾಷ್ಟ್ರೀಯ ರಸಾಯನಿಕ ಪ್ರಯೋಗಾಲಯದ ನಿವೃತ್ತ ವಿಜ್ಞಾನಿಗಳಾದ ಡಾ. ಪ್ರಕಾಶ ವಡಗಾಂವಕರ್ ರವರು ಸಮಾರಂಭದಲ್ಲಿ ಭಾಗವಹಿಸಿದ್ದರು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಸ್. ಕೆ. ಸಾತ್ನೂರ್ ಗಣ್ಯರನ್ನು ಸ್ವಾಗತಿಸಿದರು. ಅಕಾಡೆಮಿಯ ವೈಜ್ಞಾನಿಕ ಅಧಿಕಾರಿಗಳಾದ ಶ್ರೀ ವಿ. ಜಿ. ಉಮೇಶ್‌ರವರು ವಂದಿಸಿದರು.

ದೇಶದ ವಿವಿಧ ರಾಜ್ಯಗಳಾದ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ರಾಜಸ್ಥಾನ ಮತ್ತು ಇನ್ನಿತರೆ ಸ್ಥಳಗಳಿಂದ ಶಿಕ್ಷಣ ತಜ್ಞರು, ವಿಜ್ಞಾನಿಗಳು, ಯುವ-ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಪದವಿ ವಿದ್ಯಾರ್ಥಿಗಳು ಸೇರಿ ಸುಮಾರು 450 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳದಲ್ಲಿ ವಿವಿಧ ವೈಜ್ಞಾನಿಕ ಅಧಿವೇಶನಗಳಲ್ಲಿ 07 ಆಹ್ವಾನಿತ ಉಪನ್ಯಾಸಗಳನ್ನು ಈ ಕೆಳಕಂಡಂತೆ ಆಯೋಜಿಸಲಾಗಿತ್ತು:

| | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| Talk 01 | Prof. Apparaju Venkataraman<br>Professor, Dept. of PG Studies and Research in Chemistry, Jnana Ganga, Gulbarga University, Kalaburgi | Molecules to Material Fascinating Journey in Chemical and Material Science |
| Talk 02 | Dr. P Wadagoankar<br>Emeritus Scientist, CSIR-National Chemical Laboratory, Dr. Homi Bhabha Road, Pashan, Pune | Sustainable Polymer from Biomass-Breezing Chemistry with material processing |
| Talk 03 | Dr. J Suryanarayana<br>Associate Professor, Department of Physics, Indian Institute of Technology, Hyderabad | Memristor device based on TiO2 for the Detection of Bovine Serum Albumin (BSA) |
| Talk 04 | Dr. P J Bhat<br>Former Scientist, ISRO | Space Debris – Are We Ready For The Disaster? & Landing to Moon Surface: Opportunities and Challenges |

| | ತಜ್ಞರು | ಉಪನ್ಯಾಸದ ಶೀರ್ಷಿಕೆ |
|---|---|---|
| **Talk 05** | Dr. Meenakshi Viswanathan<br>Associate Professor, BITS Pilani, Hyderabad | Scaling Up Science On The Small-Scale: Soft Lithography To Micromixers |
| **Talk 06** | Dr. Saptarishi Chaudhuri<br>Associate Professor, Raman Research Institute<br>C. V. Raman Avenue, Bengaluru | Quantum Technology with Ultra-cold atoms |

ಸಮ್ಮೇಳನಕ್ಕೆ ಸಲ್ಲಿಕೆಯಾದ 120 ಸಂಶೋಧನಾ ಪ್ರಬಂಧಗಳಲ್ಲಿ 90 ಉತ್ತಮ ಹಾಗೂ ಪ್ರಮುಖ ಸಂಶೋಧನಾ ಪ್ರಬಂಧಗಳನ್ನು ಆಯ್ಕೆಮಾಡಿ ಪರಿಸರ ಸ್ನೇಹಿ ಇ-ಪುಸ್ತಕ ಸಿಡಿರೂಪದಲ್ಲಿ ಐಎಸ್‌ಬಿಎನ್ ಸಂಖ್ಯೆಯೊಂದಿಗೆ ಸಂಚಿಕೆಯನ್ನು ಪ್ರಕಟಿಸಲಾಯಿತು.








## 6. ವಿಜ್ಞಾನ ಲೋಕ ಪ್ರಕಟಣೆ

ಅಕಾಡೆಮಿಯು 'ವಿಜ್ಞಾನ ಲೋಕ' ಎಂಬ ದ್ವೈಮಾಸಿಕ ಸಂಚಿಕೆಯನ್ನು 2007ರ ಆಗಸ್ಟ್‌ನಿಂದ ನಿರಂತರವಾಗಿ ಪ್ರಕಟಿಸುತ್ತಿದೆ. 2019-'20ನೇ ಸಾಲಿನಲ್ಲಿ 06 ಸಂಚಿಕೆಗಳನ್ನು 2019ರ ಮೇ, ಜುಲೈ, ಸೆಪ್ಟೆಂಬರ್ ಮತ್ತು ನವೆಂಬರ್ ಹಾಗೂ 2020ರ ಜನವರಿ ಮತ್ತು ಮಾರ್ಚ್ ಮಾಹೆಗಳಲ್ಲಿ ಪ್ರಕಟಿಸಲಾಗಿದೆ. ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ರಾಜ್ಯದ ವಿವಿಧ ವಿಜ್ಞಾನ ಪದವಿ ಪೂರ್ವ ಮತ್ತು ವಿಜ್ಞಾನ ಪದವಿ ಕಾಲೇಜು, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳಿಗೆ ಮತ್ತು ಇನ್ನಿತರೆ ಸಂಘ ಸಂಸ್ಥೆಗಳಿಗೆ ಉಚಿತವಾಗಿ ವಿತರಿಸಲಾಗಿದೆ. ವಿಜ್ಞಾನ ಲೋಕದ ಎಲ್ಲಾ ಸಂಚಿಕೆಗೆಗಳನ್ನು ಅಕಾಡೆಮಿಯ ವೆಬ್ ಸೈಟ್ ನಲ್ಲಿ www.kstacademy.in ಅಪ್ ಲೋಡ್ ಮಾಡಲಾಗಿದೆ.



















## 7. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ

ಅಕಾಡೆಮಿಯ ವತಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ವಿಶೇಷ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ಈ ಉಪನ್ಯಾಸ ಮಾಲೆಯಲ್ಲಿ ವಿದ್ಯಾರ್ಥಿಗಳು ಆಧುನಿಕ ವೈಜ್ಞಾನಿಕ ಸಂಶೋಧನೆಯ ಬಗ್ಗೆ ತಮ್ಮ ಜ್ಞಾನಪರಿಧಿಯನ್ನು ವಿಸ್ತರಿಸಿಕೊಳ್ಳಲು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳಲು ಅನುವು ಮಾಡಿಕೊಡಲಾಗುತ್ತಿದೆ. ಪ್ರತಿ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2-3 ದಿನಗಳ ಕಾಲ ನಡೆಸಲಾಗಿದ್ದು, 2019-'20ನೇ ಸಾಲಿನಲ್ಲಿ 09 ಕಾರ್ಯಕ್ರಗಳನ್ನು ನಡೆಸಲಾಗಿದ್ದು, ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಒಟ್ಟು 1204 ಸ್ನಾತಕೋತ್ತರ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ. ಕಾರ್ಯಕ್ರಮದ ಕೊನೆಯಲ್ಲಿ ಉಪನ್ಯಾಸಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಬಹು ಆಯ್ಕೆ ಪ್ರಶ್ನೆಗಳನ್ನೊಳಗೊಂಡ ಪರೀಕ್ಷೆಯನ್ನು ನಡೆಸಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ, ಮೊದಲ 3 ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ. 5,000/-, ರೂ. 3,000/- ಮತ್ತು ರೂ. 2,000/- ಗಳ ನಗದು ಬಹುಮಾನಗಳನ್ನು ನೀಡಲಾಯಿತು. ಅಕಾಡೆಮಿಯ ವತಿಯಿಂದ ಆಯೋಜಿಸಲಾದ ಸ್ನಾತಕೋತ್ತರ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಸಹಯೋಗ ಸಂಸ್ಥೆ | ವಿಷಯ | ದಿನಾಂಕ | ಫಲಾನುಭವಿಗಳು |
|---|---|---|---|---|
| 1 | ಅಕಾಡೆಮಿ ಕಛೇರಿ | ರಿಸರ್ಚ್ ಮೆಥಡಾಲಜಿ & ಡಾಟಾ ಅನಾಲೈಸಿಸ್ | 2019 ಜೂನ್ 26-28 | 80 |
| 2 | ತುಮಕೂರು ವಿಶ್ವವಿದ್ಯಾಲಯ | ಭೌತ ವಿಜ್ಞಾನ | 2019ರ ಆಗಸ್ಟ್ 19 & 20 | 250 |
| 3 | ಅಕಾಡೆಮಿ ಕಛೇರಿ | ಬೇಸಿಕ್ ಪ್ರಿನ್ಸಿಪಲ್ಸ್ & ಅಪ್ಲಿಕೇಷನ್ಸ್ ಆಫ್ ಜಿಯೋ ಇನ್ಫಾರ್ಮೇಟಿಕ್ಸ್ | 2019 ಆಗಸ್ಟ್ 27-29 | 90 |
| 4 | ಅಕಾಡೆಮಿ ಕಛೇರಿ | ರೀಸೆಂಟ್ ಅಡ್ವಾಂಸ್‌ಮೆಂಟ್ ಇನ್ ಕೆಮಿಕಲ್ ಸೈನ್ಸ್&ಇಂಜಿನಿಯರಿಂಗ್ | 2019 ಸೆಪ್ಟೆಂಬರ್ 5-7 | 114 |
| 5 | ಬೆಂಗಳೂರು ವಿಶ್ವವಿದ್ಯಾಲಯ | ಭೂಗೋಳ – ಜಿಯೋಇಫಾರ್ಮೈಟಿಕ್ಸ್‌ನ ಮೂಲ ತತ್ವಗಳು & ಅನ್ವಯಿಕಗಳು | 2019 ಸೆಪ್ಟೆಂಬರ್ 17 & 18 | 160 |

| ಕ್ರ. ಸಂ. | ಸಹಯೋಗ ಸಂಸ್ಥೆ | ವಿಷಯ | ದಿನಾಂಕ | ಫಲಾನುಭವಿಗಳು |
|---|---|---|---|---|
| ೬ | ಅಕಾಡೆಮಿ ಕಛೇರಿ | ಬಟಾನಿಸ್ಟ್ ಆಫ್ ಟ್ವೆಂಟಿಫಸ್ಟ್ ಸೆಂಚುರಿ | 2019 ಅಕ್ಟೋಬರ್ 23-25 | 110 |
| ೭ | ಅಕಾಡೆಮಿ ಕಛೇರಿ | ಜಿಯೋಇನ್ಫಾರ್ಮೇಟಿಕ್ಸ್ & ಇಟ್ಸ್ ಅಪ್ಲಿಕೇಷನ್ಸ್ | 2019 ಡಿಸೆಂಬರ್ 03-05 | 120 |
| ೮ | ಅಕಾಡೆಮಿ ಕಛೇರಿ | ನ್ಯಾನೋಟೆಕ್ನಾಲಜಿ | 2020ರ ಜನವರಿ 22-24 | 100 |
| ೯ | ಕೆ. ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ, ನಿಟ್ಟೆ ವಿಶ್ವವಿದ್ಯಾಲಯ, ದೇರಲಕಟ್ಟೆ | ಜೀವರಸಾಯನಶಾಸ್ತ್ರ | 2020ರ ಮಾರ್ಚ್ 5 -7 | 180 |




















## ೮. ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು

ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು, ಯುವ ಸಂಶೋಧಕರು ಮತ್ತು ಬೋಧಕರು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಮುಂಚೂಣಿ ವಿಷಯಗಳಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ಅನುವಾಗುವಂತೆ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ಆರ್ಥಿಕ ವರ್ಷ ೨೦೧೯–'೨೦ನೇ ಸಾಲಿನಲ್ಲಿ ಈ ಕೆಳಕಂಡ ಮೂರು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಒಟ್ಟು ೩೩೦ ಶಿಬಿರಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ:

| ಕ್ರ. ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ | ಫಲಾನುಭವಿಗಳು |
|---|---|---|---|---|
| 1 | ಇಂಟೆಲೆಕ್ಚುಯಲ್ ಪ್ರಾಪರ್ಟಿರೈಟ್ಸ್ | ೨೦೧೯ರ ಜುಲೈ ೧೭–೧೮ | ಅಕಾಡೆಮಿ ಕಛೇರಿ | ೧೨೦ |
| ೨ | ಇಂಟಿಗ್ರೇಟೆಡ್ ಫಾರ್ಮಿಂಗ್ ಫಾರ್ ಫಾರ್ಮರ್ಸ್ | ೨೦೧೯ರ ಮೇ ೩೧ – ಜೂನ್ ೦೧ | ಅಕಾಡೆಮಿ ಕಛೇರಿ | ೧೧೦ |
| ೩ | ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ & ರೊಬೋಟಿಕ್ಸ್ | ೨೦೧೯ರ ಡಿಸೆಂಬರ್ ೧೬–೧೮ | ಅಕಾಡೆಮಿ ಕಛೇರಿ | ೧೦೦ |









## ೯. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವ, ವೈಜ್ಞಾನಿಕ ಚಿಂತನೆ ಮತ್ತು ಸೃಜನಶೀಲತೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವ, ಪ್ರಚಲಿತ ವೈಜ್ಞಾನಿಕ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆಗಳನ್ನು ಆಯೋಜಿಸಲಾಗುತ್ತಿದೆ. ಪ್ರತಿ ಕಾರ್ಯಕ್ರಮದಲ್ಲಿ ಕೇಂದ್ರ ವಿಷಯಕ್ಕೆ ಸಂಬಂಧಿಸಿದ ಎರಡು ವಿಶೇಷ ಉಪನ್ಯಾಸಗಳನ್ನು ಹಾಗೂ ವಿದ್ಯಾರ್ಥಿಗಳಿಗೆ ಪ್ರಬಂಧ (ಕನ್ನಡ & ಇಂಗ್ಲಿಷ್) ಸ್ಪರ್ಧೆ, ಮಾದರಿ ತಯಾರಿಕೆ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ೨೦೧೯-'೨೦ನೇ ಸಾಲಿನಲ್ಲಿ ಒಟ್ಟು ಎರಡು ಕಾರ್ಯಕ್ರಮಗಳನ್ನು ಅಕಾಡೆಮಿಯ ಕಛೇರಿ ಮತ್ತು ಇತರೆ ಸಂಸ್ಥೆಗಳ ಸಹಯೋಗದಲ್ಲಿ ಎರಡು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಒಟ್ಟು ೫೨೦ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ:

| ಕ್ರ. ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ (ಸಂಸ್ಥೆಯ ಹೆಸರು) | ಫಲಾನುಭವಿಗಳು |
|---|---|---|---|---|
| ೧ | ಅಂತಾರಾಷ್ಟ್ರೀಯ ಜೀವ ವೈವಿಧ್ಯತೆ ದಿನಾಚರಣೆ | ೨೦೧೯ರ ಮೇ ೨೨ | ಅಕಾಡೆಮಿ ಕಛೇರಿ | ೭೫ |
| ೨ | ಅಂತಾರಾಷ್ಟ್ರೀಯ ಓಜೋನ್ ಪದರ ರಕ್ಷಣೆ | ೨೦೧೯ರ ಸೆಪ್ಟೆಂಬರ್ ೧೬ | ಸಿದ್ಧಗಂಗ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ೧೨೫ |
| ೩ | ಇಂಜಿನಿಯರ್ಸ್ ಡೇ | ೨೦೧೯ರ ಸೆಪ್ಟೆಂಬರ್ ೧೭ | ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು | ೧೮೦ |
| ೪ | ಹೈಡ್ರೋಜನ್ ಬಾಂಡಿಂಗ್ ಶತಮಾನೋತ್ಸವ | ೨೦೨೦ರ ಮಾರ್ಚ್ ೦೪ | ಅಕಾಡೆಮಿ ಕಛೇರಿ | ೧೪೦ |










## 10. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು

ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಆವಿಷ್ಕಾರಕ ಮನೋಭಾವನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ 2020ರ ಜನವರಿ 18 ರಂದು ಸ್ಟಿಂಗ್ 2020 – ವಿಜ್ಞಾನ ಮಾಡಲ್ ಪ್ರದರ್ಶನ ಸ್ಪರ್ಧೆಯನ್ನು ಎಗ್ಗ್-ಹೆಡ್ಸ್ ಪ್ರೈ. ಲಿ., ಬೆಂಗಳೂರು ಇವರ ಸಹಯೋಗದಲ್ಲಿ ಅಕಾಡೆಮಿ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಮಾದರಿಗಳನ್ನು ರಾಜ್ಯದ ವಿವಿಧೆಡೆಗಳಿಂದ ಬಂದ ಪ್ರೌಢಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದರು.







## 11. ವಿಭಾಗ ಮತ್ತು ರಾಜ್ಯ ಮಟ್ಟದ ನಾಟಕ, ಗಣಿತ, ಚಿತ್ರಕಲೆ/ಪೈಂಟಿಂಗ್ ಹಾಗೂ ಪ್ರಬಂಧ ಸ್ಪರ್ಧೆ

ಅಕಾಡೆಮಿಯ ವತಿಯಿಂದ ಮೊಟ್ಟ ಮೊದಲ ಬಾರಿಗೆ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ವಿಭಾಗ ಮತ್ತು ರಾಜ್ಯ ಮಟ್ಟಗಳಲ್ಲಿ ವಿಜ್ಞಾನ ನಾಟಕ, ಗಣಿತ ಮಾಡಲ್, ಗಣಿತ ರಸಪ್ರಶ್ನೆ ಮತ್ತು ಚಿತ್ರಕಲೆ/ಪೈಂಟಿಂಗ್ ಸ್ಪರ್ಧೆಗಳನ್ನು ಹಾಗೂ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡ ಪ್ರಬಂಧ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಮೊದಲಿಗೆ ರಾಜ್ಯದ ನಾಲ್ಕು ವಿಭಾಗಗಳಾದ ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ವಿಭಾಗ ಮಟ್ಟದ ಸ್ಪರ್ಧೆಗಳನ್ನು ಈ ಕೆಳಕಂಡ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿ, ನಂತರ ರಾಜ್ಯ ಮಟ್ಟದ ಸ್ಪರ್ಧೆಯನ್ನು 2020ರ ಮಾರ್ಚ್ 6-7 ರಂದು ಬೆಂಗಳೂರಿನಲ್ಲಿ ಅಕಾಡೆಮಿ ಕಛೇರಿಯಲ್ಲಿ ನಡೆಸಲಾಯಿತು :

| ಕ್ರ. ಸಂ | ವಿಭಾಗ | ಸಹಯೋಗ ಸಂಸ್ಥೆ ಮತ್ತು ಸ್ಥಳ | ದಿನಾಂಕ |
|---|---|---|---|
| 1 | ಮೈಸೂರು | ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು | 2019ರ ನವೆಂಬರ್ 6-8 |
| 2 | ಬೆಳಗಾವಿ | ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ | 2020ರ ಜನವರಿ 25 & 27 |
| 3 | ಕಲಬುರಗಿ | ಶ್ರೀ ಗವಿಸಿದ್ದೇಶ್ವರ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕೊಪ್ಪಳ | 2019 ಡಿಸೆಂಬರ್ 23-24 |
| 4 | ಬೆಂಗಳೂರು | ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ | 2020 ಫೆಬ್ರವರಿ 11-12 |

ರಾಜ್ಯ ಮಟ್ಟದ ಸ್ಪರ್ಧೆಗಳನ್ನು ರಂಗಮಂದಿರ, ಕಿರುತೆರೆ ಹಾಗೂ ಬೆಳ್ಳಿತೆರೆಯ ಖ್ಯಾತ ನಟರಾದ ಶ್ರೀ ಸುಂದರ್ ವೀಣಾ ಮತ್ತು ಶ್ರೀಮತಿ ರೋಹಿಣಿ ರಂಘುನಂದನ್ ರವರು ಉದ್ಘಾಟಿಸಿದರು. ಮಾರ್ಚ್ 6 ರಂದು ವಿಜ್ಞಾನ ನಾಟಕ ಹಾಗೂ ಗಣಿತ ಮಾಡಲ್ ಸ್ಪರ್ಧೆಗಳನ್ನು ನಡೆಸಲಾಯಿತು. ಮಾರ್ಚ್ 7 ರಂದು ಗಣಿತ ರಸಪ್ರಶ್ನೆ ಮತ್ತು ಚಿತ್ರಕಲೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ರಾಜ್ಯದ ನಾಲ್ಕು ವಿಭಾಗಗಳಿಂದ ವಿಭಾಗಮಟ್ಟದಲ್ಲಿ ವಿಜೇತರಾದ 162 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು











## 12. ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳು

ವಿಶೇಷ ಚೇತನ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಒಂದು ವೇದಿಕೆಯನ್ನು ಕಲ್ಪಿಸಲು ಹಾಗೂ ಅವರಲ್ಲಿ ಆತ್ಮವಿಶ್ವಾಸ ಮತ್ತು ಮನೋಸ್ಥೈರ್ಯವನ್ನು ತುಂಬಲು ವಿಶೇಷ ಚೇತನರಿಗೆ 2019-'20ನೇ ಆರ್ಥಿಕ ವರ್ಷದಲ್ಲಿ ಎರಡು ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ನಡೆಸಲಾಗಿದೆ:

| ಕ್ರ. ಸಂ. | ಕಾರ್ಯಕ್ರಮ | ದಿನಾಂಕ | ಸಹಯೋಗ |
|---|---|---|---|
| 1 | ವಿಶೇಷ ಚೇತನ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ | 2020ರ ಫೆಬ್ರವರಿ 11 | ಸಮರ್ಥನಂ ಟ್ರಸ್ಟ್, ಬೆಂಗಳೂರು |
| 2 | ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು ಮತ್ತು ಕಾರ್ಯಕ್ರಮ ಆಯೋಜನೆ | 2020ರ ಫೆಬ್ರವರಿ 26-28 | ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ |

## 13. ಸ್ಮಾಲ್ ಗ್ರಾಂಟ್ಸ್

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಅಕಾಡೆಮಿಯ ವತಿಯಿಂದ ವಿಜ್ಞಾನ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಅಲ್ಪ ಮೊತ್ತದ ಅನುದಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಆರ್ಥಿಕ ವರ್ಷ 2019-'20ನೇ ಸಾಲಿನಲ್ಲಿ 08 ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಲಾಗಿದೆ.

| ಕ್ರ. ಸಂ. | ಸಹಯೋಗ ಸಂಸ್ಥೆ | ವಿಷಯ | ದಿನಾಂಕ | ಅನುದಾನ |
|---|---|---|---|---|
| 1 | ಎನ್ವಿರಾನ್ಮೆಂಟಲ್ ಅಸೋಷಿಯೇಷನ್ ಆಫ್ ಬೆಂಗಳೂರು | ಸೌರಶಕ್ತಿಯ ಬಗ್ಗೆ ಕಾರ್ಯಾಗಾರ ಮತ್ತು ವಸ್ತುಪ್ರದರ್ಶನ | 2019ರ ಜೂನ್ 22 | 30,000 |
| 2 | ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ, ಪೀಣ್ಯ | ಅಡ್ವಾನ್ಸ್ ಇನ್ ಮೆಟೀರಿಯಲ್ ರೀಸರ್ಚ್ ಸಮ್ಮೇಳನ | 2019ರ ಜುಲೈ 25 - 27 | 25,000 |
| 3 | ಅಕಾಡೆಮಿ ಕಛೇರಿ | ಕನ್ನಡದಲ್ಲಿ ಪದಕಮ್ಮಟ | 2019ರ ಆಗಸ್ಟ್ 18 | 19,000 |
| 4 | ಸಾಗರ್ ಸೈನ್ಸ್ ಫೋರಂ, ಸಾಗರ | ಜೀವಶಾಸ್ತ್ರ, ಪರಿಸರ ವಿಜ್ಞಾನ ಮತ್ತು ವಿಕಸನ ಜೀವಶಾಸ್ತ್ರ ಹ್ಯಾಂಡ್ಸ್-ಆನ್ ಕಾರ್ಯಾಗಾರ | 2020ರ ಜನವರಿ | 20,000 |
| 5 | ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶಿರಸಿ | ಡಾ. ಅಬ್ದುಲ್ ಕಲಾಂ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ - ಶಿರಸಿ ತಾಲ್ಲೂಕಿನ ಪ್ರೌಢಶಾಲೆಗಳಿಗೆ ಭೇಟಿ | 2019ರ ಜುಲೈ – ಡಿಸೆಂಬರ್ | 1,50,000 |
| 6 | ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಿರ್ಮಾಣ ಸಂವಾದ | ಕನ್ನಡ ಅಭಿವೃದ್ಧಿ ಪ್ರಾಧಿಕಾರ | | 50,000 |
| 7 | ವಿಜ್ಞಾನ ಮಾದರಿ ವಸ್ತು ಪ್ರದರ್ಶನ ಕಾರ್ಯಕ್ರಮ | ಪ್ರಯೋಗ್ ಸಂಸ್ಥೆ, ಬೆಂಗಳೂರು | 2019ರ ಡಿಸೆಂಬರ್ 08 | 50,000 |

## 14. ನ್ಯಾನೋ ಜಾತಾ ಕಾರ್ಯಕ್ರಮಗಳು

ಅಕಾಡೆಮಿಯ ವತಿಯಿಂದ ಸೆಂಟರ್ ಫಾರ್ ನ್ಯಾನೋ ಸೈನ್ಸ್ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸ್ (ಸಿ.ಇ.ಎನ್.ಎಸ್) ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ರವರ ಸಹಯೋಗದಲ್ಲಿ 2020ರ ಜನವರಿ 21 ರಂದು ನ್ಯಾನೋ ಜಾತಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ನ್ಯಾನೊ ಜಾತಾ ಕಾರ್ಯಕ್ರಮದಲ್ಲಿ ಖ್ಯಾತ ವಿಜ್ಞಾನಿಗಳಿಂದ ನ್ಯಾನೋ ತಂತ್ರಜ್ಞಾನಕ್ಕೆ ಸಂಬಂಧಿಸಿದ ಎರಡು ಉಪನ್ಯಾಸಗಳನ್ನು ಹಾಗೂ ನ್ಯಾನೊ ಕಿಟ್‌ನ ಪ್ರದರ್ಶನ, ಹ್ಯಾಂಟ್ಸ್-ಆನ್ ತರಬೇತಿ ಹಾಗೂ ರಸಪ್ರಶ್ನೆ ಸ್ಪರ್ಧೆಯನ್ನೂ ಆಯೋಜಿಸಲಾಗಿತ್ತು.

ನ್ಯಾನೊ ಜಾಥಾ ಕಾರ್ಯಕ್ರಮವನ್ನು ಖ್ಯಾತ ವಿಜ್ಞಾನಿ ಮತ್ತು ನ್ಯಾನೊ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ (ಸಿಎನ್‌ಎಸ್) ಕೇಂದ್ರದ ಮಾನ್ಯ ನಿರ್ದೇಶಕ ಪ್ರೊಫೆಸರ್ ಜಿ. ಯು. ಕುಲಕರ್ಣಿ ರವರು ಉದ್ಘಾಟಿಸಿದರು. ಬೆಂಗಳೂರಿನ ಸುತ್ತ ಮುತ್ತಲಿನ ಕಾಲೇಜುಗಳಂದ ಸುಮಾರು 110 ವಿದ್ಯಾರ್ಥಿಗಳು ಭಾಗವಹಿಸಿ, ನ್ಯಾನೋ ಕಿಟ ಬಳಸುವ ಬಗ್ಗೆ ಹ್ಯಾಂಡ್ಸ್-ಆನ್ ತರಬೇತಿಯನ್ನು ಪಡೆದರು.






**ಸಂಪರ್ಕಿಸಬೇಕಾದ ವಿಳಾಸ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರದ ಹತ್ತಿರ
ಜಿ.ಕೆ.ವಿ.ಕೆ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪುರ ಪೋಸ್ಟ್, ಯಲಹಂಕ,
ಬೆಂಗಳೂರು – 560 097
ಫೋನ್/ಫ್ಯಾಕ್ಸ್ : 080-29721550; 080-29721549
ಇ-ಅಂಚೆ : **ksta.gok@gmail.com** ಜಾಲತಾಣ : **www.kstacademy.in**